# ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಸಂ. ಡೀನ್ (ಕೃಷಿ)/24/ 467 /2021-22

ಡೀನ್ (ಕೃಷಿ)ರವರ ಕಛೇರಿ,
ಕೃಷಿ ಮಹಾವಿದ್ಯಾಲಯ,
ಧಾರವಾಡ - 580 005
ದಿನಾಂಕ 23.07.2021

## ಅಧಿಸೂಚನೆ

ವಿಷಯ: ಆರೋಗ್ಯ ಕೇಂದ್ರ, ಕೃಮವಿ, ಧಾರವಾಡದ ಸಹಾಯಕ ವೈದ್ಯಾಧಿಕಾರಿಗಳು (ಮಹಿಳೆ) (ತಾತ್ಕಾಲಿಕ) ಹುದ್ದೆಗೆ ನೇಮಕಾತಿ ಮಾಡುವ ಕುರಿತು.

ಉಲ್ಲೇಖ: ಕುಲಸಚಿವರು ಕೃವಿವಿ, ಧಾರವಾಡ ಇವರ ಪರವಾನಿಗೆ ಪತ್ರದ ಸಂಖ್ಯೆ.

****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಆರೋಗ್ಯ ಕೇಂದ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಧಾರವಾಡದಲ್ಲಿ 2021-22ನೇ ಸಾಲಿನ "ಸಹಾಯಕ ವೈದ್ಯಾಧಿಕಾರಿಗಳು" (ಮಹಿಳೆ) ಗುತ್ತಿಗೆ ಆಧಾರಿತ ಹುದ್ದೆಗೆ 179 ದಿನಗಳ ವರೆಗೆ ತಾತ್ಕಾಲಿಕವಾಗಿ ತೊಡಗಿಸಿಕೊಳ್ಳಲು (ಲೆಕ್ಕ ಶೀರ್ಷಿಕೆ ಸಂಖ್ಯೆ: 2030/310) ರ ಅಡಿಯಲ್ಲಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| Name of Post | No. of Post | Qualification | Salary (Rs.) |
|---|---|---|---|
| ಸಹಾಯಕ ವೈದ್ಯಾಧಿಕಾರಿ (ಮಹಿಳಾ) | 01 | 1. ಎಂ.ಬಿ.ಬಿ.ಎಸ್ (M.B.B.S) ಅಥವಾ ಬಿ.ಎ.ಎಮ್.ಎಸ್. (BAMS) ಪದವಿ ಹೊಂದಿರಬೇಕು ಕಡ್ಡಾಯವಾಗಿ ಇಂಟರ್ನಶಿಪ್ ಪೂರೈಸಿರಬೇಕು ಹಾಗೂ ಕೆ.ಎಂ.ಸಿ.ಯ ನೊಂದಣಿಯನ್ನು ಹೊಂದಿರಬೇಕು.<br>2. ಅಭ್ಯರ್ಥಿಯ ವಯಸ್ಸು ಸಂದರ್ಶನ ದಿನಕ್ಕೆ ಅನ್ವಯಿಸುವಂತೆ 35 ವರ್ಷ (ಸಾಮಾನ್ಯ ವರ್ಗ)/ 38 ವರ್ಷ (ಹಿಂದುಳಿದ ವರ್ಗ) / 40 ವರ್ಷ (ಪ.ಪಂ. ಮತ್ತು ಪ.ಜಾತಿ)ಗಳಿಗೆ ಮೀರದಂತೆ ಇರಬೇಕು. | ರೂ. 45,000/- * ಎಂ.ಬಿ.ಬಿ.ಎಸ್(MBBS) ಪದವಿ ಹೊಂದಿರುವವರಿಗೆ<br><br>ರೂ. 25,000/- * ಬಿ.ಎ.ಎಮ್.ಎಸ್ (BAMS) ಪದವಿ ಹೊಂದಿರುವವರಿಗೆ |

ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಎನ್. ಹೆಚ್.ಎಂ./ಆರ್ಬಿಎಸ್ಕೆ/13/2017-18, ದಿನಾಂಕ: 28.08.2017 ರ ಅನ್ವಯ ಮಾಸಿಕ ವೇತನವು ರೂ. 45,000/- ಎಂ.ಬಿ.ಬಿ.ಎಸ್ (M.B.B.S) ಮತ್ತು ರೂ. 25,000/- ಬಿ.ಎ.ಎಮ್.ಎಸ್ (BAMS) ಪದವಿ ಹೊಂದಿರುವವರಿಗೆ ನಿಗದಿಪಡಿಸಿರುತ್ತಾರೆ.

ನೇಮಕಾತಿ ಪಡೆಯಲು ಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿದ ಅರ್ಜಿ ನಮೂನೆಯನ್ನು ಎರಡು ಪ್ರತಿಗಳೊಂದಿಗೆ **ದಿನಾಂಕ 06.08.2021 ರಂದು ಬೆಳಿಗ್ಗೆ 11-00 ಗಂಟೆ ರಂದು ಮೇಲೆ ನಮೂದಿಸಿದ ಸಮಯಕ್ಕೆ ಸರಿಯಾಗಿ ಸಂದರ್ಶನಕ್ಕೆ**, ಡೀನ್(ಕೃಷಿ) ರವರ ಕಛೇರಿ, ಕೃಷಿ ಮಹಾವಿದ್ಯಾಲಯ, ಧಾರವಾಡದಲ್ಲಿ ಹಾಜರಾಗಲು ತಿಳಿಸಲಾಗಿದೆ. ಸಂದರ್ಶನಕ್ಕೆ ಬರುವಾಗ ತಮ್ಮ ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ಮೂಲ ದಾಖಲೆಗಳನ್ನು ಹಾಗೂ ಎರಡು ಪ್ರತಿಗಳನ್ನು ಸಂದರ್ಶನದ ಸಮಯದಲ್ಲಿ ತರಲು ತಿಳಿಸಲಾಗಿದೆ. **ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಮುಂಗಡವಾಗಿ ಕಳುಹಿಸಬಾರದು.**

ಸಂದರ್ಶನಕ್ಕೆ ಬರುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹಾಜರಾಗಬೇಕು. ಸದರಿ ನೇಮಕಾತಿಯು ತಾತ್ಕಾಲಿಕವಾಗಿರುವುದರಿಂದ ಯಾವುದೇ ಸಮಯದಲ್ಲಿ ಕಾರಣ ತಿಳಿಸದೇ ಕೆಲಸದಿಂದ ತೆಗೆಯಬಹುದು. ಇದು ಕೃಷಿ ವಿಶ್ವವಿದ್ಯಾಲಯದ ಯಾವುದೇ ಖಾಯಂ ನೇಮಕಾತಿ ಹಕ್ಕಿಗೆ ಒಳಪಟ್ಟಿರುವುದಿಲ್ಲ.

Fwd. for uploading to website 26/07/2021

(ಬಿ. ಡಿ. ಬಿರಾದಾರ)
ಡೀನ್(ಕೃಷಿ)
ಡೀನ್ (ಕೃಷಿ)
ಕೃಷಿ ಮಹಾವಿದ್ಯಾಲಯ
ಧಾರವಾಡ-580 005.

- ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ ರಾಯಚೂರ/ ಯು.ಎ. ಎಚ್.ಎಸ್. ಶಿವಮೊಗ್ಗಾ/ಯು.ಎಚ್.ಎಸ್. ಬಾಗಲಕೋಟ/ಕೆ.ವಿ.ಎ.ಎಫ್. ಎಸ್. ಯು, ಬೀದರ ಇವರಿಗೆ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ.
- ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ/ ಗುಲ್ಬರ್ಗಾ, ವಿಶ್ವವಿದ್ಯಾಲಯ, ಗುಲ್ಬರ್ಗಾ/ಮೈಸೂರು ವಿಶ್ವವಿದ್ಯಾಲಯ, ಮೈಸೂರು/ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು/ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ/ ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು./ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ. ಇವರಿಗೆ ಮಾಹಿತಿಗಾಗಿ ಮತ್ತು ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ.
- ಗ್ರಂಥಪಾಲಕರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಈ ವಿಷಯವನ್ನು ಕೃಷಿ ವಿಶ್ವವಿದ್ಯಾಲಯ, ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.
- ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ ಡಿ.ಸಿ. ಕೌಂಪೌಂಟ್, ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಹೆಚ್ಚಿನ ರೀತಿಯಲ್ಲಿ ಪ್ರಚಾರ ಮಾಡಲು ಕೋರಲಾಗಿದೆ.

**ಪ್ರತಿಯನ್ನು:** ಕಾರ್ಯದರ್ಶಿ, ಕುಲಪತಿಗಳ ಕಛೇರಿ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಈ ಮಾಹಿತಿಯನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತರಲು ಕೋರಲಾಗಿದೆ.

---

## ಅನುಬಂಧ

ಫೋಟೊ

1. ಅಭ್ಯರ್ಥಿಯ ಹೆಸರು :
2. ವಿಳಾಸ ಮತ್ತು ಮೊಬೈಲ್ ಸಂಖ್ಯೆ :
3. ಜನ್ಮ ದಿನಾಂಕ :
4. ವಿದ್ಯಾರ್ಹತೆ :
5. ಜಾತಿಯ ವಿವರ :
6. ಅನುಭವ :

**ಸೂಚನೆ:** ದೃಢಿಕೃತ ದಾಖಲೆಗಳ ಕಟ್ಟು (Bind) ಮಾಡಿದ ಎರಡು ಪ್ರತಿಗಳನ್ನು ಸಂದರ್ಶನಕ್ಕೆ ಬರುವಾಗ ಕಡ್ಡಾಯವಾಗಿ ತರತಕ್ಕದ್ದು.